ಓ ಎಸ್ ನಂ: 276/2021
ಪಿ. ಡಬ್ಲ್ಯೂ-1

**(ಮಧ್ಯಂತರ ಅರ್ಜಿ ನಂ.15 ರಿಂದ 17 ರ ಮೇಲೆ ಆದ ಆದೇಶದ ಮೇರೆಗೆ ಇಂದು ದಿನಾಂಕ 11-08-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ. ಎಸ್ ವಿ ಕೆ ವಕೀಲರಿಂದ**

ಈ ದಾವೆಯನ್ನು ಬಿಜಾಪೂರ ಇವರ ಮೇಲೆ ಸಮೃದ್ಧಿ ಬ್ಯೂಲ್ಡರ್ಸ ಮತ್ತು ಚರಂತಿಮಠ ಇವರ ಮೇಲೆ ಹಾಕಿದ್ದೇನೆ. ದಾವಾ ಆಸ್ತಿ ಸರ್ವೆ ನಂ. 81 ಎ/5 ಅದರ ವಿಸ್ತೀರ್ಣ 16 ಎಕರೆ 22 ಗುಂಟೆ ಇದೆ. ದಾವಾ ಆಸ್ತಿ ಮೊದಲು ನನ್ನ ತಂದೆ ಕೃಷ್ಣಾ ಗದಗಕರ ಮತ್ತು ಅವರ ಸ್ನೇಹಿತ ಉಮಾ ಶಂಕರ ಲೋನಿಕರ ಅವರದು ಆಗಿತ್ತು. ಈ ದಾವಾ ಆಸ್ತಿಯನ್ನು ನನ್ನ ತಂದೆ ಕೃಷ್ಣಾ ಗದಗಕರ ಮತ್ತು ಅವರ ಸ್ನೇಹಿತ ಉಮಾ ಶಂಕರ ಲೋನಿಕರ ಅವರು ತಮ್ಮ ಸ್ವಂತಕ್ಕೆ ಖರೀದಿ ಹಿಡಿದ ಆಸ್ತಿ ಎಂದರೆ ಸರಿ. ಈ ಆಸ್ತಿಯನ್ನು 1964 ರಲ್ಲಿ ಖರೀದಿಸಿದ್ದರು. ಅದರಂತೆ ಹಕ್ಕು ಬದಲಾವಣೆ ಆಗಿದೆ.

ದಾವಾ ಆಸ್ತಿ ಖರೀದಿ ಹಿಡಿದಾಗ ಈ ದಾವೆಯಲ್ಲಿ ತೋರಿಸಿದ ನಂಬರ ಇತ್ತೋ ಅಥವಾ ಬೇರೆ ಇತ್ತೋ ಎಂಬ ಪ್ರಶ್ನೆಗೆ ಅಷ್ಟೊಂದು ನೆನಪಿಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ದಾವಾ ಆಸ್ತಿ ಸರ್ವೆ ನಂ. 81 ಎ/5 ಮತ್ತು ವಿಸ್ತೀರ್ಣ 16 ಎಕರೆ 22 ಗುಂಟೆ ಇದೆ ಎಂದು ತೋರಿಸಿದ್ದೇನೆ. ನನ್ನ ತಂದೆ ಖರೀದಿ ಹಿಡಿದ ಆಸ್ತಿಯ ಮ್ಯುಟೇಶನ ಪ್ರತಿ ಹಾಜರು ಪಡಿಸಿದ್ದೇನೆ. ನನ್ನ ತಂದೆ ಮತ್ತು ಲೋನಿಕರ ಇವರು ಖರೀದಿ ಹಿಡಿದ ಆಸ್ತಿಯ ಮೂಲ ಕ್ರಯ ಪತ್ರ ಎಲ್ಲಿ ಇದೆ ಎಂಬದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಆ ಮೂಲ

ಕ್ರಯ ಪತ್ರ ಹಾಜರು ಪಡಿಸಿಲ್ಲ.

ನನ್ನ ತಂದೆ ಮತ್ತು ಲೋನಿಕರ ಇವರು ತಮ್ಮ ಜೀವಿತಾ ಅವಧಿಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಗೆ ಜಿ ಪಿ ಎ ಮಾಡಿಕೊಟ್ಟಿದ್ದರು ಎಂದರೆ ಸರಿ. ಆ ಜಿ ಪಿ ಎ ಯನ್ನು 1991 ರಲ್ಲಿ ಮಾಡಿಕೊಟ್ಟಿದ್ದರು. ಜಿ ಪಿ ಎ ಆಧಾರದ ಮೇರೆಗೆ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು 2 ಮತ್ತು 3 ನೇ ಪ್ರತಿವಾದಿಗೆ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಆಗ ಜಿ ಪಿ ಎ ರದ್ದಾಗಿತ್ತು. 1995 ರಲ್ಲಿ ಜಿ ಪಿ ಎ ರದ್ದಾಗಿದೆ.

ಈ ದಾವೆಯಲ್ಲಿ 1991 ರಲ್ಲಿ ಆದ ಜಿ ಪಿ ಎ ಮತ್ತು ದಿಃ 12-07-1999 ರಂದು ಆದ ಕ್ರಯ ಪತ್ರವನ್ನು ರದ್ದು ಪಡಿಸಬೇಕಂತಾ ಪರಿಹಾರ ಕೋರಿದ್ದೇನೆ. 1 ನೇ ಪ್ರತಿವಾದಿಗೆ ನೋಂದಾಯಿತ ಜಿ ಪಿ ಎ ಮಾಡಿಕೊಟ್ಟಿದ್ದರು. 1995 ರಲ್ಲಿ ಜಿ ಪಿ ಎ ರದ್ದಾದ ಬಗ್ಗೆ ನನ್ನ ತಂದೆ ಮತ್ತು ಲೋನಿಕರ ಇವರು ದಾವೆ ಸಲ್ಲಿಸಿದ್ದರು. ಸದರಿ ಅಸಲು ದಾವೆ ನಂ. 85/2001 ನೇದ್ದನ್ನು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಧಾರವಾಡದಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿಯೂ ಸಹಿತ 1991 ರಲ್ಲಿ ಆದ ಜಿ ಪಿ ಎ ಮತ್ತು ದಿಃ 12-07-1999 ರಂದು ಆದ ಕ್ರಯ ಪತ್ರವನ್ನು ರದ್ದು ಪಡಿಸಬೇಕಂತಾ ಪರಿಹಾರ ಕೋರಿದ್ದರು. ಆ ದಾವೆ ವಜಾ ಆಗಿದೆ. ಆ ದಾವೆ ವಜಾ ಆದ ಬಗ್ಗೆ ತೀರ್ಪು ಮತ್ತು ಡಿಕ್ರಿಯ ಪ್ರತಿಯನ್ನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ. ಅಸಲು ದಾವೆ ನಂ. 85/2001 ನೇದ್ದರಲ್ಲಿ ಆದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನೇ ಮಾಡಿ ನನ್ನ

ತಂದೆ ಆರ್.ಎಫ್.ಎ ನಂ.136/2006 ನೇದ್ದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಅದು ದಿಃ 01-06-2007 ರಲ್ಲಿ ವಜಾ ಆಗಿದೆ ಎಂದರೆ ಸರಿ.

**ಈ ಹಂತದಲ್ಲಿ ಸಾಕ್ಷಿದಾರರು ತಮ್ಮ ಆರೋಗ್ಯ ಸರಿ ಇಲ್ಲ ಸಾಕ್ಷಿ ಹೇಳಲು ಆಗುತ್ತಿಲ್ಲ ಅಂತಾ ಹೇಳಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.